ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ಮದ್ಯ ಮಾರಾಟದಲ್ಲಿ ಅವ್ಯವಹಾರ ಮಾಡುತ್ತಿದ್ದರೂ ಅಬಕಾರಿ ಇಲಾಖೆ ಗಮನ ಹರಿಸದೇ ಇರುವ ಕುರಿತು

ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

1285 (1494) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಾರವಾರ ಜಿಲ್ಲೆಯಲ್ಲಿ ವಿವಿಧ ಗ್ರಾಮಗಳಲ್ಲಿ/ಸ್ಥಳಗಳಲ್ಲಿ ನಿಯಮ ಮೀರಿ ಎಂ.ಎಸ್.ಐ.ಎಲ್/ಸಿ.ಎಲ್ 2-ಸಿ-7 ಮತ್ತು ಇತರ ಎಂ.ಆರ್.ಪಿ. ಅಂಗಡಿ / ವೈನ್ ಶಾಪ್‌ಗಳು ಸರ್ಕಾರದ ಎಂ.ಆರ್.ಪಿ. ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಾರವಾರ ಜಿಲ್ಲೆಯಲ್ಲಿ ಎಂ.ಎಸ್.ಐ.ಎಲ್. ಮದ್ಯದ ಅಂಗಡಿಗಳಲ್ಲಿ ಪ್ರತಿ ಎಂ.ಆರ್.ಪಿ. ದರದ ಮೇಲೆ ಬಾಟಲಿಗೆ ಹೆಚ್ಚಿನ ದರ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ; ಕಾರವಾರ ಅಬಕಾರಿ ಇಲಾಖೆಯವರು ಎಷ್ಟು ಎಂ.ಎಸ್.ಐ.ಎಲ್. ವೈನ್ ಶಾಪ್ ಅಂಗಡಿಗಳ ಮೇಲೆ ಕೇಸುಗಳನ್ನು ದಾಖಲಿಸಿದೆ; (ಎಂ.ಎಸ್.ಐ.ಎಲ್. ಮದ್ಯದ ಅಂಗಡಿಗಳವಾರು, ತಾಲ್ಲೂಕುವಾರು, ದಿನಾಂಕದೊಂದಿಗೆ ಸಂಪೂರ್ಣ ವಿವರ ನೀಡುವುದು)

(ಇ) ಜಿಲ್ಲೆಯ ಕೆಲವೊಂದು ತಾಲ್ಲೂಕುಗಳಲ್ಲಿ ಬಾರ್ ಲೈಸೆನ್ಸ್ ಹೊಂದಿರುವ ಮಾಲೀಕರು ತಮ್ಮಲ್ಲಿರುವ ಮದ್ಯವನ್ನು ಹಳ್ಳಿಗಳಲ್ಲಿ ಮಾರಾಟ ಮಾಡುತ್ತಿದ್ದರೂ, ಅಬಕಾರಿ/ಪೊಲೀಸ್ ಇಲಾಖೆಯವರು ಸ್ಪಂದಿಸದಿರುವುದು ಸರಿಯೇ; ಈ ಬಗ್ಗೆ ಸಂಬಂಧಿಸಿದವರ ಮೇಲೆ ಕ್ರಮಕೈಗೊಳ್ಳುವರೇ; ಹಾಗೂ ಸಂಬಂಧಿಸಿದ ಬಾರ್ ಮಾಲೀಕರಿಗೆ ನೋಟೀಸ್ ಜಾರಿ ಮಾಡಿ ಹೊರಗಡೆ ಮದ್ಯ ಮಾರಾಟ ಕಂಡು ಬಂದಲ್ಲಿ, ಅವರ ಪರವಾನಗಿ ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ; (ವಿವರ ನೀಡುವುದು)

(ಈ) ಮದ್ಯ ಮಾರಾಟದಲ್ಲಿ ಪೈಟೋಗಳನ್ನು ತಪ್ಪಿಸಲು ಮತ್ತು ಜನರನ್ನು ವಂಚಿಸುವುದನ್ನು ತಪ್ಪಿಸಲು ಮದ್ಯದ ಮಾರಾಟ ದರವನ್ನು ಸಾರ್ವಜನಿಕರಿಗೆ ಬೋರ್ಡ್‌ಗಳಲ್ಲಿ ಹಾಕಬೇಕೆಂದು ಕಡ್ಡಾಯ ಮಾಡಲು ಸಾಧ್ಯವೇ?